

ಚಿತ್ರ: ಎಂ.ಆರ್.ಮಧುಸೂದನ

ಕ್ಯಾಮೆರಾದಲ್ಲಿ ತೆಗೆದ ಫೋಟೋದಿಂದ ಎನ್ನುವುದು ಸರಳ ಉತ್ತರವಾದರೂ, ವಿಧಾನ ಅಷ್ಟು ಸರಳವಾಗಿಲ್ಲ.

### ಹುಲಿ ಗಣತಿ

ನಮ್ಮ ಸಂರಕ್ಷಣೆಯ ಪ್ರಯತ್ನಗಳು ಸರಿಯಾದ ದಾರಿಯಲ್ಲಿ ಸಾಗುತ್ತಿವೆಯೇ? ಎನ್ನುವುದು ನಮಗೆ ವ್ಯಾಪಾರವೊಂದರಲ್ಲಿ ಲಾಭವಾಗುತ್ತಿದೆಯೇ ನಷ್ಟವಾಗುತ್ತಿದೆಯೇ ಎನ್ನುವುದನ್ನು ತಿಳಿಯಲು ಆಯವ್ಯಯವನ್ನು ಲೆಕ್ಕ ಹಾಕಿದಂತೆ; ಅದಕ್ಕಾಗಿ ಬ್ಯಾಲನ್ಸ್ ಶೀಟ್ ಒಂದನ್ನು ತಯಾರಿಸಿದಂತೆ. ನಾವು ನಿರ್ವಹಿಸುತ್ತಿರುವ ವಿಧಾನ ವೈಜ್ಞಾನಿಕವಾಗಿದೆಯೇ? ಎಂದು ತಿಳಿಯಲು ಸಹ ಇದು ಸಹಕಾರಿ. ಹುಲಿ ಒಂದು ನಿಶಾಚಾರಿ ಪ್ರಾಣಿ. ಮುಸ್ಸಂಜೆಯಿಂದ ಬೆಳಗಿನ ಜಾವದವರೆಗೆ ಬೇಟೆಯನ್ನು ಹುಡುಕುತ್ತಾ ಕಾಡಿನಲ್ಲಿ ಅಲೆಯುತ್ತದೆ. ಅಂಕುಡೊಂಕಾದ ದಾರಿಯಲ್ಲಿ ದೊಡ್ಡ ಹರವುಗಳ ಅಂಚಿನಲ್ಲಿ ಚಲಿಸುತ್ತಾ ಹುಲಿ ಅವಿತು ಕುಳಿತು ಬೇಟೆಗಾಗಿ ಹೊಂಚು ಹಾಕುತ್ತದೆ. ವ್ಯಾಘ್ರ ಸಾಮ್ರಾಜ್ಯದ ಕೇಂದ್ರ ಸ್ಥಾನದಲ್ಲಿರುವವು ಹೆಣ್ಣು ಹುಲಿಗಳು. ಪ್ರತಿಯೊಂದು ಹೆಣ್ಣು ಹುಲಿ ತನ್ನದೇ ಆದ ಆವಾಸ ವಲಯವನ್ನು ಸ್ಥಾಪಿಸಿಕೊಳ್ಳುತ್ತದೆ. ಅದನ್ನು ಇತರ ಹೆಣ್ಣು ಹುಲಿಗಳು ಅತಿಕ್ರಮಿಸದಂತೆ ರಕ್ಷಿಸಿಕೊಳ್ಳುತ್ತದೆ. ಆದರೆ ತನ್ನೊಂದಿಗೆ ಪ್ರಾಯಕ್ಕೆ ಬಾರದ ಇತರ ಮರಿ ಹುಲಿಗಳನ್ನು ಉಳಿಸಿಕೊಳ್ಳುವುದರಿಂದ ಇದರ ಅಧಿಪತ್ಯಕ್ಕೇನೂ ತೊಂದರೆಯಿಲ್ಲ.

**ಪಶ್ಚಿಮ ಘಟ್ಟ ಪ್ರದೇಶದಲ್ಲಿ 776 ಹುಲಿಗಳಿವೆ. ಅದು ಕರ್ನಾಟಕದ 406, ಕೇರಳದ 136, ತಮಿಳುನಾಡಿನ 229 ಹಾಗೂ ಗೋವಾದ 5 ಹುಲಿಗಳನ್ನು ಒಳಗೊಂಡಿದೆ.**

ವಯಸ್ಕ ಗಂಡು ಹುಲಿ ಎರಡು– ಮೂರು ಹೆಣ್ಣುಗಳ ವಾಸ ವಲಯಗಳನ್ನು ಒಳಗೊಂಡ ವಿಸ್ತೃತ ಕಾವಲು ಪ್ರದೇಶಕ್ಕೆ ಒಡೆಯನಾಗಿ ತನ್ನ ಅಧಿಪತ್ಯದಲ್ಲಿ ಇರುವ ಹೆಣ್ಣು ಹುಲಿಗಳನ್ನು ಕೂಡುತ್ತದೆ. ಇದಕ್ಕೆ ಜನಿಸಿದ ಹುಲಿ ಮರಿಗಳು ಎರಡು ವರ್ಷ ಪ್ರಾಯಕ್ಕೆ ತಲುಪುತ್ತಿದ್ದಂತೆಯೇ ತಮ್ಮ ತಾಯಂದಿರಿಂದ ಹೊರದೂಡಲ್ಪಡುತ್ತವೆ. ನಂತರ ತಮ್ಮದೇ ಆದ ಪ್ರತ್ಯೇಕ ವಲಯಗಳನ್ನು ಸ್ಥಾಪಿಸಿಕೊಳ್ಳಲು ಹೋರಾಡುತ್ತವೆ. ಈ ಜೀವನ ಶೈಲಿಯ ಹುಲಿಗೆ ಆಹಾರ ದೊರಕುವುದು ಸುಲಭ ಸಾಧ್ಯವೇನಲ್ಲ. ಆದರೆ ಆಕ್ರಮಣದ ಮೊದಲ ಬಿರುಸಿಗೇ ಬಲಿ ಪ್ರಾಣಿ ನೆಲಕ್ಕೊರಗುತ್ತದೆ. ಹಠಾತ್ತಾಗಿ ಉಂಟಾಗುವ ಪ್ರಾಣಿಯ ಗಂಟಲಿನ ಮೇಲಿನ ಹುಲಿಯ ಬಿಗಿ ಹಿಡಿತ ಅದನ್ನು ಉಸಿರುಗಟ್ಟಿಸಿ ಸಾಯಿಸುತ್ತದೆ. ಅಧ್ಯಯನಗಳ ಪ್ರಕಾರ, ಹುಲಿ ವಾರಕ್ಕೊಮ್ಮೆ ಒಂದು ಬಲಿ ಪ್ರಾಣಿಯನ್ನು ಕೊಲ್ಲುತ್ತದೆ. ಎಂದರೆ ವರ್ಷಕ್ಕೆ ಐವತ್ತು ಪ್ರಾಣಿಗಳು ಹುಲಿಯೊಂದಕ್ಕೆ ಆಹಾರವಾಗಬೇಕು. ನಾಲ್ಕನೇ ವರ್ಷದಿಂದ ಸಂತಾನೋತ್ಪತ್ತಿಗೆ ಸಿದ್ಧವಾಗುವ ಹೆಣ್ಣು ಹುಲಿ ಪ್ರತಿ ಎರಡೂವರೆ ವರ್ಷಕ್ಕೊಮ್ಮೆ 3–4 ಮರಿಗಳನ್ನು ಹಾಕುತ್ತದೆ.

ಹುಲಿಯ ಜೀವನದ ಈ ಎಲ್ಲಾ ಘಟನೆಗಳೂ ನಡೆಯುವುದು ಕಾಡಿನ ಗರ್ಭದಲ್ಲಿ. ಹಾಗಿದ್ದಾಗ ಅಲ್ಲಿ ಹೋಗಿ ಅದನ್ನು ಎಣಿಸಿ ಲೆಕ್ಕ ಇಡುವುದು ಸಾಧ್ಯವೇ.. ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಬೇರೆ ವನ್ಯಜೀವಿಗಳಿಗೆ ಅನುಸರಿಸುವ 'ಸೀಳು ದಾರಿ' ಗಣತಿಯೇ ಇದಕ್ಕೆ ಸಾಧ್ಯವಿಲ್ಲ. ಆದುದರಿಂದಲೇ ಇದಕ್ಕೆ 'ಕ್ಯಾಮೆರಾ ಟ್ರ್ಯಾಪ್' ವಿಧಾನವನ್ನು ಬಳಸುತ್ತಾರೆ.

ಈ ವಿಧಾನದಲ್ಲಿ ವಿಶೇಷವಾದ ಕ್ಯಾಮರಾವನ್ನು ಹುಲಿ ಓಡಾಡುವ ದಾರಿಯಲ್ಲಿ ಕಾಡಿನಲ್ಲಿ ಅಡಗಿಸಿ ಇಡಲಾಗುತ್ತದೆ. ಈ ಕ್ಯಾಮೆರಾಗಳು